

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸರ್ವೇ ಜನಾಃ ಸುಖಿನೋ ಭವಂತು!....

"ಮೈಂ ಹಿಂದೂ ನಹೀಂ ಹೂಂ!" ಹೀಗೆ ಹೇಳಿದವರು ಬೇರೆ ಯಾರೂ ಅಲ್ಲ. ಶತಮಾನಗಳ ಹಿಂದೆ ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿ ಭರತಖಂಡವನ್ನೆಲ್ಲಾ ಸುತ್ತಿ ಧರ್ಮಜಾಗೃತಿಯನ್ನುಂಟುಮಾಡಿದ ಶಂಕರಾಚಾರ್ಯರ ಪರಂಪರೆಯಲ್ಲಿ ಬಂದ ಉತ್ತರಭಾರತದಲ್ಲಿರುವ ದ್ವಾರಕಾ ಮತ್ತು ಜ್ಯೋತಿರ್ಮಠದ ನಿಯೋಜಿತ ಶಂಕರಾಚಾರ್ಯರಾದ ಶ್ರೀ ಅವಿಮುಕ್ತೇಶ್ವರಾನಂದ ಸರಸ್ವತಿ ಸ್ವಾಮಿಗಳವರು. ಸಂದರ್ಭ: ಕಳೆದ ತಿಂಗಳ ಆರಂಭದಲ್ಲಿ ದೆಹಲಿಯ ತೀನ್‌ಮೂರ್ತಿ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಸಂವಾದಗೋಷ್ಠಿ. ವಿಷಯ: "ಶಿಕ್ಷಣ, ಆರೋಗ್ಯ ಮತ್ತು ಅಭಿವೃದ್ಧಿಯಲ್ಲಿ ಹಿಂದೂಸಂಸ್ಥೆಗಳು" (The Hindu Organizations in Education, Health and Development). ಇಂಗ್ಲೆಂಡಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ದೆಹಲಿಯ CSDS ಸಂಸ್ಥೆ (Centre for the Study of Developing Societies) ಮೂರು ದಿನಗಳ ಈ ಸಂವಾದ ಗೋಷ್ಠಿಯನ್ನು ಏರ್ಪಡಿಸಿತ್ತು. ಎರಡು ವಾರಗಳ ಹಿಂದಿನ ಅಂಕಣದಲ್ಲಿ ಪ್ರಸ್ತಾಪಿಸಿದ ನಮ್ಮ ದೆಹಲಿಯಾತ್ರೆಯ ಉದ್ದೇಶವಾದರೂ ಇದೇ ಆಗಿತ್ತು.

ಈ ಗೋಷ್ಠಿಯಲ್ಲಿ ನಡೆದದ್ದು ಸಮಾಜವಿಜ್ಞಾನಿಗಳು (social scientists) ಮತ್ತು ಧಾರ್ಮಿಕ ಮುಖಂಡರ (religious practioners) ಮುಖಾಮುಖಿ. ನಮ್ಮ ಪಕ್ಕದಲ್ಲಿ ಕುಳಿತಿದ್ದ ಹರಿಯಾಣದ ಸ್ವಾಮಿ ಅಗ್ನಿವೇಶ್‌ರವರು ಮೂಲತಃ ಆಂಧ್ರಪ್ರದೇಶದವರು ಎಂಬ ಸಂಗತಿ ನಮಗೆ ತಿಳಿದಿರಲಿಲ್ಲ. ಇದರಲ್ಲಿ ಭಾಗವಹಿಸಿದ್ದ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಮುಂದಾಳುಗಳಿಗೆ ತಮ್ಮನ್ನು ಹಿಂದೂಗಳೆಂದು ಗುರುತಿಸಿಕೊಳ್ಳಲು ಇಷ್ಟವಿರುವುದಿಲ್ಲವೆಂಬ ಅರಿವು ಗೋಷ್ಠಿಯ ಆಯೋಜಕರಿಗೆ ಮೊದಲೇ ಇತ್ತು. ಆದಕಾರಣವೇ ಅವರು ಆಹ್ವಾನಿತರೆಲ್ಲರಿಗೂ ಪೂರ್ವಭಾವಿಯಾಗಿ ಒಂದು ವಿಚಾರವನ್ನು ಸ್ಪಷ್ಟಪಡಿಸಿದ್ದರು: 'ಈ ಗೋಷ್ಠಿಗೆ ಆಯ್ಕೆಮಾಡಿಕೊಂಡಿರುವ ವಿಷಯದಲ್ಲಿ ಕಂಡುಬರುವ 'ಹಿಂದೂ' ಶಬ್ದವನ್ನು ವ್ಯಾಪಕ ಅರ್ಥದಲ್ಲಿ ಬಳಸಲಾಗಿದೆ'. (Please note that the term "Hindu" is being used in its broadest sense. Many of the practitioners speaking in the conference do not identify themselves as "Hindu" but prefer terms like Sanatana Dharma). ವಾಸ್ತವವಾಗಿ ಈ ಗೋಷ್ಠಿಯನ್ನು ಏರ್ಪಡಿಸುವ ಪೂರ್ವದಲ್ಲಿ ನಡೆದ ಆಯೋಜಕಸಮಿತಿಯ ಸಭೆಯಲ್ಲಿ ಬಿಸಿ ಬಿಸಿ ಚರ್ಚೆ ನಡೆದು ಮತಾವಲಂಬಿಗಳ ಜೊತೆಯಲ್ಲಿ ಕುಳಿತು ಸಂವಾದ ನಡೆಸಲು ಅನೇಕ ಸಮಾಜವಿಜ್ಞಾನಿಗಳಿಗೆ ಇಷ್ಟವಾಗಲಾರದು ಎಂಬ ಅಂಶ ವ್ಯಕ್ತವಾಗಿತ್ತು. ಆದರೂ ಇಬ್ಬರನ್ನೂ ಮುಖಾಮುಖಿಯಾಗಿಸುವ ವಿಶಿಷ್ಟ ಪ್ರಯತ್ನ ನಡೆದಿತ್ತು. ಮೇಲೆ ಉಲ್ಲೇಖಿಸಿದ ಶಂಕರಾಚಾರ್ಯರ ಮಾತಿನ ಆಶಯ ತಾವು ಹಿಂದೂಗಳಲ್ಲವೆಂದು ಅಲ್ಲಗಳೆಯುವುದಾಗಿರಲಿಲ್ಲ. ಹಿಂದೂಧರ್ಮದ ಹಿರಿಮೆಗರಿಮೆ ಈಗ ಉಳಿದಿಲ್ಲವೆಂಬ ವಿಷಾದ ಅವರ ಮಾತುಗಳಲ್ಲಿ ಮಡುಗಟ್ಟಿತ್ತು. ತಂದೆ-ಮಗನ ಮಧ್ಯೆ ಜಗಳ ಉಂಟಾದಾಗ ಸಿಟ್ಟಿಗೆದ್ದ ತಂದೆ ಮಗನನ್ನು ಕುರಿತು 'ನೀನು ನನ್ನ ಮಗನೇ ಅಲ್ಲ, ಹೋಗು' ಎನ್ನುವ ರೀತಿಯ ಆಕ್ರೋಶ ಅಡಗಿತ್ತು.

ಹಾಗೆ ನೋಡಿದರೆ ಹಿಂದೂ ಧರ್ಮ ಜಗತ್ತಿನ ಇತರೆ ಧರ್ಮಗಳಂತೆ ಒಂದು ನಿರ್ದಿಷ್ಟವಾದ ಧರ್ಮ ಅಲ್ಲವೇ ಅಲ್ಲ. ಭಾರತದ ಪ್ರಾಚೀನ ದಾರ್ಶನಿಕ ಗ್ರಂಥಗಳಲ್ಲಿ 'ಹಿಂದೂ' ಶಬ್ದದ ಉಲ್ಲೇಖವೇ ಇಲ್ಲ. 'ಸಿಂಧೂ' ನದಿಯ ತೀರದಲ್ಲಿದ್ದ ಜನಾಂಗದವರನ್ನು ಕುರಿತು ಪರ್ಷಿಯನ್ನರು ಬಳಸಿದ ಶಬ್ದವೇ ಅಪಭ್ರಂಶಗೊಂಡು 'ಹಿಂದೂ' ಆಯಿತೆಂದು ಇತಿಹಾಸಜ್ಞರ ಅಂಬೋಣ. ಈ ಧರ್ಮ ಒಂದು ನಿರ್ದಿಷ್ಟಕಾಲದಲ್ಲಿ ಉದಯಿಸಿದ್ದಲ್ಲ. ಬೇರೆ ಧರ್ಮಗಳಂತೆ ಇದರ ಸಂಸ್ಥಾಪಕರು ಯಾರೂ ಇಲ್ಲ. ಅನೇಕ ವೈರುಧ್ಯಗಳಿಂದ ಕೂಡಿದ ಧರ್ಮವಿದು. ಇದರಲ್ಲಿ ಏಕದೇವೋಪಾಸನೆಯೂ ಇದೆ, ಬಹುದೇವತಾರಾಧನೆಯೂ ಇದೆ. ದ್ವೈತವೂ ಇದೆ, ಅದ್ವೈತವೂ ಇದೆ. ಈಶ್ವರವಾದವೂ (theistic) ಇದೆ, ನಿರೀಶ್ವರವಾದವೂ (non-theistic) ಇದೆ. ವೇದಗಳನ್ನು ಅಪೌರುಷೇಯವೆಂದು ಅಚಲವಾದ ನಂಬಿಕೆಯನ್ನಿಟ್ಟುಕೊಂಡು ಬಂದ ವೈದಿಕಮತಧರ್ಮಗಳೂ ಇವೆ, ಅನುಭಾವದ ನೆಲೆಗಟ್ಟಿನ ಮೇಲೆ ವೇದಗಳನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ತೋರಿದ ಅವೈದಿಕಮತಧರ್ಮಗಳೂ ಇವೆ. ಒಟ್ಟಾರೆ ಭಾರತದಲ್ಲಿ ಹುಟ್ಟಿದ ವಿಭಿನ್ನ ಮತಧರ್ಮಗಳಲ್ಲಿರುವ ಸಾಂಸ್ಕೃತಿಕ ಏಕತೆಯನ್ನು ಗುರುತಿಸಿ ಅನ್ಯಧರ್ಮೀಯರು ಬಳಕೆಯಲ್ಲಿ ತಂದ 'ಹಿಂದೂ' ಶಬ್ದ ಈಗ ಜಗತ್ತಿನೆಲ್ಲೆಡೆ ವ್ಯಾಪಕವಾಗಿ ಬಳಕೆಯಲ್ಲಿದೆ. ಮಂಗನಿಂದ ಮಾನವನಾದ ಎಂದು ಪ್ರತಿಪಾದಿಸಿದ ಖ್ಯಾತ ಜೀವವಿಜ್ಞಾನಿ ಡಾರ್ವಿನ್‌ನ ಜೀವವಿಕಾಸವಾದದಂತೆ ಮಾನವನ ಸೃಷ್ಟಿಯಾದಂದಿನಿಂದ ಭರತಖಂಡದಲ್ಲಿ ವಿಭಿನ್ನ ಕಾಲಘಟ್ಟಗಳಲ್ಲಿ ಉದಯಿಸಿದ ದಾರ್ಶನಿಕರು ಈ ಜೀವ, ಜಗತ್ತು, ದೇವರು ಮತ್ತು ಅವುಗಳ ಮಧ್ಯೆ ಇರುವ ಸಂಬಂಧದ ಬಗ್ಗೆ ಮಾಡಿದ ವಿಭಿನ್ನ ಅಧ್ಯಾತ್ಮಿಕವಿಚಾರಗಳ ವಿಕಾಸದ ಒಟ್ಟು ಹೆಸರು 'ಹಿಂದೂ ಧರ್ಮ' ಎನ್ನಬಹುದು. ಈ ದೇಶದ ನಿವಾಸಿಗಳೆಲ್ಲಾ ಭಾರತೀಯರು. ಆದರೆ ಈ ದೇಶದಲ್ಲಿ ಭಾರತೀಯರು ಯಾರೂ ಇಲ್ಲ. ಇಲ್ಲಿರುವವರು ಕನ್ನಡಿಗರು, ತಮಿಳರು, ಮಲಯಾಳಿಗಳು, ತೆಲುಗರು, ಮರಾಠಿಗರು, ಗುಜರಾತಿಗಳು, ಬಂಗಾಲಿಗಳು. ಇದೇ ಸ್ಥಿತಿ ಹಿಂದೂಗಳದೂ ಆಗಿದೆ. ಹೀಗಾಗಿ 'ಹಿಂದೂ ಎಂದರೆ ಯಾರು?' ಎಂಬ ಪ್ರಶ್ನೆಗೆ ನೇರವಾಗಿ ಉತ್ತರಿಸುವುದು ಕಷ್ಟ: ಸರಳವಾದ ಉತ್ತರವೆಂದರೆ ಕ್ರೈಸ್ತರು, ಮುಸ್ಲಿಮರು, ಸಿಖ್ಖರು, ಜೈನರು, ಬೌದ್ಧರು, ಪಾರ್ಸಿಗಳು ಅಲ್ಲದವರು.

ಭಾರತದ ಸಂವಿಧಾನ 'ಹಿಂದೂ' ಶಬ್ದದ ಅರ್ಥವಿವರಣೆಯನ್ನು ನೀಡುವುದಿಲ್ಲ. 'ಹಿಂದೂ ಕಾಯಿದೆ' ಯಾರಿಗೆ ಅನ್ವಯಿಸುತ್ತದೆಯೆಂದು ಹೇಳುವಾಗ ಅದರ ಅಡಿಯಲ್ಲಿ ಸಿಖ್ಖರು, ಜೈನರು ಮತ್ತು ಬೌದ್ಧರನ್ನು ಸೇರಿಸಿದೆ. ಭಾರತೀಯರು

ವಿದೇಶೀಯರನ್ನು 'ಮ್ಲೇಚ್ಛರು' ಎಂದು ಕರೆದಂತೆ ವಿದೇಶೀಯರು ಭಾರತೀಯರನ್ನು 'ಹಿಂದೂ'ಗಳೆಂದು ಕರೆದರು. ಆದರೆ 'ಮ್ಲೇಚ್ಛ' ಎಂಬ ಶಬ್ದದಲ್ಲಿ ಇರುವ ಹೀನಾರ್ಥ 'ಹಿಂದೂ' ಎಂಬ ಶಬ್ದದಲ್ಲಿ ಇಲ್ಲ. 'ಮ್ಲೇಚ್ಛ' ಶಬ್ದದಲ್ಲಿ ಹೀನಾರ್ಥವಿದ್ದರೂ ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಶೇಷ ಗೌರವಾದರಗಳನ್ನು ಹೊಂದಿದ್ದ ಇಂಗ್ಲೆಂಡಿನ ಪ್ರಸಿದ್ಧ ಸಂಸ್ಕೃತಜ್ಞ ಮತ್ತು ಇತಿಹಾಸಜ್ಞರಾದ ಪ್ರೊಫೆಸರ್ ಎ.ಎಲ್ ಬಷಾಮ್ ಅವರು ತಮ್ಮ "The Wonder that was India" ಎಂಬ ಪ್ರಸಿದ್ಧ ಗ್ರಂಥದ ಉಪೋದ್ಘಾತದಲ್ಲಿ "as a friendly 'mleccha' of India (ಭಾರತದ 'ಮ್ಲೇಚ್ಛಮಿತ್ರ'ನಾಗಿ) ಆ ಗ್ರಂಥವನ್ನು ಬರೆದಿದ್ದಾಗಿ ಹೇಳಿಕೊಂಡಿದ್ದಾರೆ.

ಸ್ವತಂತ್ರಭಾರತದ ರಾಜಕೀಯ ಕಾರಣಗಳಿಂದಾಗಿ ಹಿಂದೂಗಳೇ ಹಿಂದೂಗಳೆಂದು ಗುರುತಿಸಿಕೊಳ್ಳಲು ಹಿಂಜರಿಯುವವರೂ ಇದ್ದಾರೆ, ಹೆಮ್ಮೆಪಟ್ಟುಕೊಳ್ಳುವವರೂ ಇದ್ದಾರೆ. 'ಸರ್ವೇ ಜನಾಃ ಸುಖಿನೋ ಭವಂತು' (ಜಗತ್ತಿನ ಜನರೆಲ್ಲರೂ ಸುಖವಾಗಿರಲಿ) ಎನ್ನುವಲ್ಲಿ ಇರುವ ಹಿಂದೂ ಧರ್ಮದ ಹಿರಿಮೆ ಗರಿಮೆಗಳು 'ಸರ್ವೇ ಹಿಂದವಃ ಭ್ರಾತರಃ ಸಂತಿ' (ಎಲ್ಲ ಹಿಂದೂಗಳು ಅಣ್ಣತಮ್ಮಂದಿರು) ಎನ್ನುವಲ್ಲಿ ಇಲ್ಲ. ಶ್ರೇಣೀಕೃತ ಹಿಂದೂ ಸಮಾಜವನ್ನು ಒಂದಾಗಿ ನೋಡುವ ಸಮಾನದೃಷ್ಟಿ ಈ ಆಧುನಿಕ ನುಡಿಗಟ್ಟಿನಲ್ಲಿದ್ದರೂ ಪ್ರಾಚೀನಕಾಲದ 'ಸರ್ವೇ ಜನಾಃ...' ಎನ್ನುವ ನುಡಿಗಟ್ಟಿನಲ್ಲಿರುವಂತೆ ಇಡೀ ಮನುಕುಲವನ್ನೇ ಒಂದಾಗಿ ನೋಡುವ ವಿಶಾಲದೃಷ್ಟಿ ಇಲ್ಲವೆಂಬುದನ್ನು ವಿಚಾರವಂತರು ಮನಗಾಣಬಹುದಾಗಿದೆ. ಈ ಮಂತ್ರದ ಆಶಯದಂತೆ ಜಗತ್ತಿನ ಜನರೆಲ್ಲರೂ ವಿಶಾಲಭಾವನೆಯನ್ನು ಬೆಳೆಸಿಕೊಂಡಿದ್ದರೆ ಕಲಹವೇ ಇರುತ್ತಿರಲಿಲ್ಲ. 'ವಸುಧೈವ ಕುಟುಂಬಕಮ್' (ಇಡೀ ವಿಶ್ವವೇ ಒಂದು ಕುಟುಂಬ) ಎನ್ನುವುದು ಆದರ್ಶಮಾತ್ರ. ಆದರೆ ವ್ಯವಹಾರದಲ್ಲಿ ಇಂದು ವಿಶ್ವದೆಲ್ಲೆಡೆ ಕಾಣುತ್ತಿರುವುದು ಸ್ವಂತ ಕುಟುಂಬದಲ್ಲಿ ನಿತ್ಯ ನಡೆಯುವ ಕಚ್ಚಾಟದ ವಿರಾಡ್‌ರೂಪ! ಇದಕ್ಕೆ ಕಾರಣ ಧರ್ಮಗಳಲ್ಲ; ಮನುಷ್ಯನ ಮನಸ್ಸಿನಲ್ಲಿರುವ ರಾಗದ್ವೇಷಗಳು. ಯಾರೋ ಹೇಳಿದ ನೆನಪು: ಒಮ್ಮೆ ಸರ್ವೇ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳೆಲ್ಲಾ ಒಟ್ಟಿಗೆ ಸೇರಿ ಸತ್ಯನಾರಾಯಣ ಪೂಜೆ ಮಾಡಿಸಿದರಂತೆ. 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಮಂತ್ರವನ್ನು ಪುರೋಹಿತರು ಹೇಳಿದಾಗ 'ಸರ್ವೇ' ಇಲಾಖೆಯವರ ಹೆಸರನ್ನು ಹೇಳಿ ತಮ್ಮ ಹೆಸರನ್ನು ಹೇಳಲಿಲ್ಲವೆಂದು ರೆವಿನ್ಯೂ ಇಲಾಖೆಯವರು ತಕರಾರು ತೆಗೆದರು. 'ನಾವೂ ಪೂಜೆಗೆ ಅರ್ಧ ಖರ್ಚು ಕೊಟ್ಟಿದ್ದೇವೆ, ನಮ್ಮ ಹೆಸರನ್ನೂ ಹೇಳಿ' ಎಂದು ಅವರ ಒತ್ತಾಯ. ದಕ್ಷಿಣೆ ಪಡೆದ ದಾಕ್ಷಿಣ್ಯಕ್ಕಾಗಿ ಪುರೋಹಿತರು ಅವರ ಹೆಸರಿನಲ್ಲಿ 'ರೆವಿನ್ಯೂ ಜನಾಃ ಸುಖಿನೋ ಭವಂತು' ಎಂದು ಮಂತ್ರ ಬದಲಾಯಿಸಿ ಹೇಳಿದರಂತೆ! ಇದೊಂದು ಕಾಲ್ಪನಿಕ ಹಾಸ್ಯಪ್ರಸಂಗ ಇರಬಹುದು. ಆದರೆ ನಮ್ಮ ಜನರ ಅಧಾರ್ಮಿಕ ನಡವಳಿಕೆಗಳಿಗೆ ಇದು ಕನ್ನಡಿ ಹಿಡಿದಂತಿದೆ. ಯಾವುದೇ ಧರ್ಮವಿರಲಿ ಆಯಾಯ ಧರ್ಮೀಯರ ದುರಾಚಾರ-ದುರ್ವರ್ತನೆಗಳನ್ನು ನಿವಾರಣೆ ಮಾಡಿ ಸದಾಚಾರ-ಸದ್ವರ್ತನೆಗಳು ನೆಲೆಗೊಳ್ಳುವಂತೆ ಮಾಡುವುದು ಅದರ ಮೂಲ ಉದ್ದೇಶ. ಜನರ ಮಾನಸಿಕ ದೌರ್ಬಲ್ಯಗಳನ್ನು ಮೂಲೋತ್ಪಾಟನೆ ಮಾಡಬೇಕಾದ ಧರ್ಮಗಳೇ ಜನರ ದೌರ್ಬಲ್ಯಗಳಾಗಿ ಬಡಿದಾಡುವಂತಾದಾಗ 'ಧರ್ಮ ಒಂದು ಅಫೀಮು ಇದ್ದಂತೆ' (religion is the opium of people' ಎಂದು ಹೀಗಳೆಯುವ ದುಃಸ್ಥಿತಿಯುಂಟಾಗುತ್ತದೆ.

Secular ಶಬ್ದದ ಅರ್ಥ ನಮ್ಮ ದೇಶದ ಜನರ ಬಳಕೆಯಲ್ಲಿರುವುದೇ ಬೇರೆ, ಪಾಶ್ಚಾತ್ಯರಲ್ಲಿರುವುದೇ ಬೇರೆ. ನಮ್ಮ ದೇಶದ ಯಾವುದೇ ಧಾರ್ಮಿಕ ಸಂಸ್ಥೆಯ ಶಾಲಾಕಾಲೇಜುಗಳಲ್ಲಿ ಧರ್ಮಬೋಧನೆ ಮಾಡಿದರೂ ಜಾತಿ-ಮತ-ಪಂಥಗಳ ಭೇದವನ್ನು ಮಾಡದೆ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡಿದರೆ ಅಂತಹ ಸಂಸ್ಥೆಗಳನ್ನು secular ಎಂದು ಕರೆಯುವುದು ವಾಡಿಕೆ. ಅಮೇರಿಕಾದೇಶದಲ್ಲಿ Secular ಎನಿಸಿದ ಸರ್ಕಾರೀ ಶಾಲೆಗಳಲ್ಲಿ ಮಕ್ಕಳಿಗೆ ಧಾರ್ಮಿಕ ಬೋಧನೆ ಮಾಡುವಂತಿಲ್ಲ, ದೇವರ ಪ್ರಾರ್ಥನೆಯನ್ನೂ ಮಾಡಿಸುವಂತಿಲ್ಲ. 'ಸತ್ಯವೇ ನಮ್ಮ ತಾಯಿ-ತಂದೆ, ಸತ್ಯವೇ ನಮ್ಮ ಬಂಧುಬಳಗ, ಸತ್ಯವಾಕ್ಯದಿ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು' ಎಂದು ನಂಬಿಕೊಂಡು ಬಂದ ನಾಡು ನಮ್ಮದು. ನಮ್ಮಲ್ಲಿ ನೈತಿಕ ಮೌಲ್ಯಗಳನ್ನು ಧಾರ್ಮಿಕಬೋಧನೆಯಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ದೇವರು ಮತ್ತು ಧರ್ಮದ ನೆಲೆವೀಡಾದ ನಮ್ಮ ದೇಶದ ರೂಪಾಯಿ ನೋಟುಗಳಲ್ಲಿ 'ಸತ್ಯಮೇವ ಜಯತೇ' ಎಂದು ಮುದ್ರಿತವಾಗಿದ್ದರೆ (ಆ ನೋಟುಗಳ ಬಳಕೆ ಅನೇಕ ವೇಳೆ ಅಸತ್ಯದಿಂದ ಕೂಡಿರುತ್ತದೆಯೆಂಬುದು ಬೇರೆ ಮಾತು) ಅಮೇರಿಕನ್ ಡಾಲರ್‌ಗಳಲ್ಲಿ "In God we trust" ಎಂದು ಮುದ್ರಿತವಾಗಿರುವುದನ್ನು ಕಾಣಬಹುದು. ಅಮೇರಿಕೆಯ ರಾಜಕಾರಣಿಗಳು ಅಧಿಕಾರಸ್ವೀಕಾರ ಮಾಡುವಾಗ ಧರ್ಮಗ್ರಂಥವಾದ ಬೈಬಲ್ ಮುಟ್ಟಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಮ್ಮ ದೇಶದ ರಾಜಕಾರಣಿಗಳಿಗೆ ಇರುವಷ್ಟು 'ಸ್ವಾತಂತ್ರ್ಯ' ಬೇರೆ ದೇಶದ ರಾಜಕಾರಣಿಗಳಿಗೆ ಇದ್ದಂತಿಲ್ಲ. ನಮ್ಮ ದೇಶದಲ್ಲಿ ತಮಗೆ ಇಷ್ಟಬಂದ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಬಹುದು ಅಥವಾ ತಮಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಅನುಗ್ರಹಿಸಿದ 'God Father' ಹೆಸರಿನ ಮೇಲೂ ಪ್ರಮಾಣವಚನ ಸ್ವೀಕರಿಸಬಹುದು!

ದೆಹಲಿಯ ಗೋಷ್ಠಿಯಲ್ಲಿ ಭಾಗವಹಿಸಿದ ಗಣ್ಯವ್ಯಕ್ತಿಗಳಲ್ಲಿ ಮತ್ತೊರ್ವರೆಂದರೆ ರಾಜೇಂದ್ರಸಿಂಹ್‌ರವರು. ರಾಜಾಸ್ಥಾನದಲ್ಲಿ 'ತರುಣ್‌ಭಾರತ್‌ಸಂಘ'ದ ಸಂಸ್ಥಾಪಕರಾದ ಅವರು 1985ರಿಂದ ಜಲಸಂರಕ್ಷಣೆಯ ಕಾರ್ಯದಲ್ಲಿ ತೊಡಗಿ ಯಾರೂ ಕಂಡರಿಯದ 'ಜಲಕ್ರಾಂತಿ'ಯನ್ನು ಮಾಡಿದ್ದಾರೆ. ಆ ರಾಜ್ಯದ 11 ಜಿಲ್ಲೆಗಳಲ್ಲಿ ರೈತರನ್ನು ಸಂಘಟಿಸಿ ಸುಮಾರು 900 ಹಳ್ಳಿಗಳಲ್ಲಿ 5,000 ಚೆಕ್‌ಡ್ಯಾಂಗಳನ್ನು ಕಟ್ಟಿಸಿದ್ದಾರೆ. ಅವುಗಳನ್ನು ಹಿಂದಿಯಲ್ಲಿ 'ಜೋಹಡ್' ಎಂದು ಕರೆಯುತ್ತಾರೆ. ಕೆಲವು ವರ್ಷಗಳ ಹಿಂದೆ ಆಗಿನ ನೀರಾವರಿ ಸಚಿವರಾಗಿದ್ದ ಎಚ್.ಕೆ. ಪಾಟೀಲರೊಂದಿಗೆ ಜೈಪುರಕ್ಕೆ ಹೋದಾಗ ಸ್ವತಃ ರಾಜೇಂದ್ರಸಿಂಹರವರು ಹತ್ತಿರದ ಹಳ್ಳಿಗಳಿಗೆ ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದಾಗ ಹಳ್ಳಿಗರ ಹೃದಯದಲ್ಲಿ ಅವರ ಬಗ್ಗೆ ಇದ್ದ ಭಾವನೆ ವರ್ಣಿಸಲಸದಳ. ರಾಜೇಂದ್ರಸಿಂಹ್ ಅವರು ಆ ರಾಜ್ಯದಲ್ಲಿ ಬತ್ತಿಹೋಗಿದ್ದ ನಾಲ್ಕು ನದಿಗಳನ್ನು ಮತ್ತೆ ಹರಿಯುವಂತೆ ಮಾಡಿ ಆಧುನಿಕ ಭಗೀರಥನೆಂದೇ ಹೆಸರಾಗಿದ್ದಾರೆ. ಸಾಮಾಜಿಕ ಒಳಿತಿಗಾಗಿ ಅವರು ಮಾಡಿದ ಈ ಅದ್ಭುತಸಾಧನೆಗಾಗಿ ಹತ್ತು ವರ್ಷಗಳ ಹಿಂದೆ (2000) ರಾಷ್ಟ್ರಪತಿ ಪ್ರಶಸ್ತಿ ಬಂದಾಗ ಅವರು ದೆಹಲಿಗೆ ಹೋಗಲಿಲ್ಲ. ರಾಷ್ಟ್ರಪತಿಗಳೇ ದಿಲ್ಲಿಯಿಂದ ಹಳ್ಳಿಗೆ ಬಂದು ಪ್ರಶಸ್ತಿ ಕೊಡಲಿ ಎಂಬುದು ಅವರ ಅಭಿಮಾನಿ ಹಳ್ಳಿಗರ ಒತ್ತಾಸೆಯಾಗಿತ್ತು. ಅದಕ್ಕೆ ಆಗ ರಾಷ್ಟ್ರಪತಿಗಳಾಗಿದ್ದ ಕೆ.ಆರ್. ನಾರಾಯಣನ್‌ರವರು ಸಮ್ಮತಿಸಿದರು. ಈ ವಿಷಯ ತಿಳಿದ ತಕ್ಷಣ ಗೊಂದಲಕ್ಕೆ ಒಳಗಾದವರು ಅಧಿಕಾರಿಗಳು. ಜಲಸಂರಕ್ಷಣೆಗೆ ಅಡ್ಡಬಂದಿದ್ದ ಗಣಿಗಾರಿಕೆಯ ವಿರುದ್ಧ ಸಮರ ಸಾರಿದ್ದ ರಾಜೇಂದ್ರಸಿಂಹ್ ಸುಪ್ರೀಂ ಕೋರ್ಟ್ ಮೊರೆಹೋಗಿ ರಾಜ್ಯದಲ್ಲಿದ್ದ ಸುಮಾರು 500 ಗಣಿಗಳನ್ನು ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದರು. ಇದರಿಂದ ಅವರ ಮೇಲೆ ದುರುದ್ದೇಶದಿಂದ ಹಾಕಿದ ನೂರಾರು ಕೇಸುಗಳು

ಇದ್ದವು. ಹೀಗಿರುವಾಗ ಅಂತಹ ವ್ಯಕ್ತಿಯನ್ನು ಸನ್ಮಾನಿಸಲು ರಾಷ್ಟ್ರಪತಿಗಳು ಬರುವುದು ಇರುಸುಮುರುಸಿನ ಪ್ರಸಂಗವಾಗಿತ್ತು. ಕೇಸುಗಳಲ್ಲಿ ಹುರುಳು ಇರಲಿಲ್ಲ. ರಾಷ್ಟ್ರಪತಿಗಳು ಬರುತ್ತಾರೆಂಬ ಕಾರಣಕ್ಕಾಗಿ ಆ ಎಲ್ಲ ಕೇಸುಗಳನ್ನು ವಾಪಾಸ್ ತೆಗೆದುಕೊಳ್ಳಲು ರಾಜ್ಯಸರ್ಕಾರ ನಿರ್ಧರಿಸಿತು.

ನದಿಗಳ ಜೋಡಣೆಯಿಂದ ಈ ದೇಶದಲ್ಲಿ ನೀರಿನ ಸಮಸ್ಯೆ ಬಗೆಹರಿಯತ್ತದೆಯೆಂಬ ನಂಬಿಕೆ ರಾಜೇಂದ್ರಸಿಂಹ್‌ರವರಿಗೆ ಇಲ್ಲ. ದೆಹಲಿಯಲ್ಲಿ ಅವರೊಂದಿಗೆ ಮಾತನಾಡುವಾಗ ನದಿಗಳ ಜೋಡಣೆಯ ಬದಲು ಅವರು ಜೋಡಿಸ ಬಯಸಿದ್ದು: 'ನದಿಯೋಂ ಕೇ ಸಾಥ್ ಲೋಗೋಂ ಕೇ ಮನ್ ಕೋ ಜೋಡನಾ ಚಾಹಿಯೇ!' (ನದಿಗಳೊಂದಿಗೆ ಜನರ ಮನಸ್ಸನ್ನು ಒಂದುಗೂಡಿಸಬೇಕಾಗಿದೆ!). ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕುರಿತು ಅವರು ರೈತರಿಗೆ ಕೊಟ್ಟ ಕರೆಯೆಂದರೆ 'ಓಡುವ ನೀರನ್ನು ನಡೆಯುವಂತೆ ಮಾಡು, ನಡೆಯುವ ನೀರನ್ನು ನಿಲ್ಲುವಂತೆ ಮಾಡು, ನಿಂತ ನೀರನ್ನು ಇಂಗುವಂತೆ ಮಾಡು!'

7.4.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑